**<u>ಕರ್ನಾಟಕ ಸರ್ಕಾರದ ನಡವಳಿಗಳು</u>**

**ವಿಷಯ:** ಪ್ರಾದೇಶಿಕ ಸಂಪರ್ಕ ಯೋಜನೆ – ಉಡಾನ್ ರಡಿ ಆಯ್ಕೆಯಾದ ವಿಮಾನ ನಿಲ್ದಾಣಗಳಿಗೆ ಒದಗಿಸಲಾದ Fire Fighting Services and Security Equipments ಗಳಿಗೆ ಶುಲ್ಕವನ್ನು ಮರುಪಾವತಿಸಲು ಅನುದಾನ ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:**
1. ಕೇಂದ್ರ ನಾಗರೀಕ ವಿಮಾನಯಾನ ಮಂತ್ರಾಲಯ ಮತ್ತು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ರಾಜ್ಯ ಸರ್ಕಾರದೊಂದಿಗೆ ಮಾಡಿಕೊಂಡಿರುವ MoU ದಿನಾಂಕ 20/04/2017.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಮೂಅಇ 90 ರಾಅವಿ 2016, ದಿನಾಂಕ 28/04/2017.
3. ಜನರಲ್ ಮ್ಯಾನೇಜರ್ (ಎಟಿಎಂ–ಎಸ್ಆರ್) – ಆರ್‌ಸಿಎಸ್, ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಮಂತ್ರಾಲಯ, ಇವರ ಪತ್ರ ಸಂಖ್ಯೆ: AAI/SR/RCS/Mysore, ದಿನಾಂಕ:26.02.2019

****

**<u>ಪ್ರಸ್ತಾವನೆ:</u>**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಕೇಂದ್ರ ನಾಗರೀಕ ವಿಮಾನಯಾನ ಮಂತ್ರಾಲಯ ಮತ್ತು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರವು (ಎಎಐ) ಕರ್ನಾಟಕ ರಾಜ್ಯದಲ್ಲಿ ಪ್ರಾದೇಶಿಕ ಸಂಪರ್ಕ ಯೋಜನೆಯನ್ನು ಅನುಷ್ಟಾನಗೊಳಿಸಲು (RCS) ದಿನಾಂಕ:20/04/2017 ರಂದು ರಾಜ್ಯ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡಿರುತ್ತದೆ.

2. ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಅಧಿಸೂಚನೆಯನುಸಾರ RCS ರಡಿ ಆಯ್ಕೆಯಾಗಿರುವ ಏರ್‌ಲೈನ್ ಆಪರೇಟರ್‌ಗಳಿಗೆ ಕೇಂದ್ರ ಸರ್ಕಾರದಿಂದ ನೀಡುತ್ತಿರುವ ವಿಜಿಎಫ್ ಮೊತ್ತದಲ್ಲಿ ರಾಜ್ಯ ಸರ್ಕಾರದ ಪಾಲಿನ ಶೇ 20% ವಿಜಿಎಫ್‌ನ್ನು ಆಯ್ಕೆಯಾದ ವಿಮಾನ ನಿಲ್ದಾಣಗಳಿಗಾಗಿ ಭರಿಸಬೇಕಾಗಿರುತ್ತದೆ. ಅದರಂತೆ RCS ರಡಿ ಆಯ್ಕೆಯಾದ ವಿಮಾನ ನಿಲ್ದಾಣಗಳಿಗೆ ಭದ್ರತೆ ಮತ್ತು ಅಗ್ನಿಶಾಮಕ ಸೇವೆಯನ್ನು ಹಾಗೂ ಕೆಲವು ರಿಯಾಯಿತಿಗಳನ್ನು ನೀಡಲಾಗಿರುತ್ತದೆ.

3. ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪತ್ರದಲ್ಲಿ ಆರ್‌ಸಿಎಸ್‌ರಡಿ ಆಯ್ಕೆಯಾದ ಮೈಸೂರು ವಿಮಾನ ನಿಲ್ದಾಣಕ್ಕೆ ರಾಜ್ಯ ಸರ್ಕಾರ, ಕೇಂದ್ರ ವಿಮಾನಯಾನ ಮಂತ್ರಾಲಯ ಮತ್ತು ಭಾರತೀಯ ವಿಮಾನ

ನಿಲ್ದಾಣಗಳ ಪ್ರಾಧಿಕಾರ, ಇವರೊಂದಿಗೆ ದಿನಾಂಕ:20.04.2017ರಂದು ಮಾಡಿಕೊಂಡ ಒಪ್ಪಂದದ ಕಂಡಿಕೆ-4.2.2 (ಸಿ)ರ ಅನುಸಾರ ದಿನಾಂಕ:01.10.2018 ರಿಂದ 31.12.2018 ರವರೆಗೆ Airport Rescue & Fire Fighting Services and Security Equipments ನೇಮಕಾತಿ ಶುಲ್ಕ ರೂ.41,81,390.77/-ಗಳನ್ನು ರಾಜ್ಯ ಸರ್ಕಾರದಿಂದ ಪಾವತಿಸುವಂತೆ ಕೋರಿರುತ್ತಾರೆ.

4. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ. ಮೂಅಇ 50 ರಾಅವಿ 2018,**
**ಬೆಂಗಳೂರು, ದಿನಾಂಕ:02.05.2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, Airport Rescue & Fire Fighting Services and Security Equipments ನೇಮಕಾತಿ ಶುಲ್ಕ ರೂ.41,81,390.77/-ಗಳನ್ನು (ನಲವತ್ತೊಂದು ಲಕ್ಷದ ಎಂಬತ್ತೊಂದು ಸಾವಿರದ ಮುನ್ನೂರ ತೊಂಬತ್ತು ರೂಪಾಯಿ ಎಪ್ಪತ್ತೇಳು ಪೈಸೆ ಮಾತ್ರ) ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ರಾಜ್ಯ ಸರ್ಕಾರವು ಪಾವತಿಸಲು ಮಂಜೂರಾತಿ ನೀಡಿದೆ.

- ಸರ್ಕಾರದ ಅಧಿಸೂಚನೆ ದಿನಾಂಕ:28.04.2017ರಲ್ಲಿ ಸೂಚಿಸಿರುವಂತೆ ಮತ್ತು ಉಡಾನ್‌ರಡಿಯಲ್ಲಿ ಕೇಂದ್ರ ನಾಗರೀಕ ವಿಮಾನಯಾನ ಮಂತ್ರಾಲಯ ಮತ್ತು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ), ಇವರು ರಾಜ್ಯ ಸರ್ಕಾರದೊಂದಿಗೆ ಮಾಡಿಕೊಂಡಿರುವ ದಿನಾಂಕ:20.04.2017ರ ಒಪ್ಪಂದದ ಅನುಸಾರ ಕ್ರಮವಹಿಸುವುದು ಹಾಗೂ ಬಿಡುಗಡೆಗೆ ಮುನ್ನ ಪರಿಶೀಲಿಸಿ ಬಿಡುಗಡೆ ಮಾಡತಕ್ಕದ್ದು.

2. ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ "3451-00-090-1-18-059-ಪ್ರಾದೇಶಿಕ ವಾಯು ಸಂಪರ್ಕ – ಇತರೆ ಖರ್ಚುಗಳು" ಇದರಡಿಯಲ್ಲಿ 2019-20ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯದಿಂದ ಭರಿಸತಕ್ಕದ್ದು.

3. ಈ ಮೊತ್ತವನ್ನು ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಐ.ಐ.ಡಿ.ಸಿ, ಬೆಂಗಳೂರು, ಇವರು ಪೇಯೀಸ್ ರಸೀದಿಯ ಮೂಲಕ ಸರ್ಕಾರದ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿ ಸೆಳೆಯಲು ಅನುಮತಿಸಿದೆ.

4. ಈ ಆದೇಶವನ್ನು ಆರ್ಥಿಕ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 01 ಟಿಎಫ್‌ಪಿ 2019, ದಿನಾಂಕ;03.04.2019ರ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯರವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
Sd/-

**(ಬಿ.ಎಸ್.ಮಂಜುನಾಥ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

**ಪ್ರತಿ**:

1. ಪಧಾನ ಮಹಾಲೇಖಪಾಲರು (ಆಡಿಟ್ –1, 2, 3/ ಂ & ಇ), ಪಧಾನ ಮಹಾಲೇಖಪಾಲರ ಕಛೇರಿ (ಕರ್ನಾಟಕ), ಎ.ಎ.ಡಿ. ಸೆಕ್ಷನ್, ಮೈನ್ ಬಿಲ್ಡಿಂಗ್, ಕೆ.ಪಿ.ಎಸ್.ಸಿ. ಕಛೇರಿ ಎದುರು, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಐ.ಐ.ಡಿ.ಸಿ, ಖನಿಜ ಭವನ ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
3. ನಿರ್ದೇಶಕರು, ಖಜಾನೆ ಇಲಾಖೆ, ವಿ.ವಿ. ಗೋಪುರ, ಬೆಂಗಳೂರು.
4. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು–02
5. ಹಿರಿಯ ನಿರ್ದೇಶಕರು, ಯೋಜನೆ ಹಾಗೂ ಸಂಪನ್ಮೂಲ ವಿಭಾಗ, ಯೋಜನೆ ಇಲಾಖೆ, ಬೆಂಗಳೂರು
6. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ. ಖನಿಜ ಭವನ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–1).
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
9. ಸರ್ಕಾರದ ಜಂಟಿ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
10. ಉಪ ಕಾರ್ಯದರ್ಶಿ–1, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ, ಸಮನ್ವಯ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
12. ಶಾಖಾ ರಕ್ಷಾ ಕಡತ / ಬಿಡಿ ಪ್ರತಿಗಳು.

***